ದಿನೇಶ್, ಗುಡ್ಡದೂರು

*ಮಾಧ್ಯಮಗಳಲ್ಲಿ ಜ್ಯೋತಿಷಿಗಳು ಹೆಂಗಸರ ಪ್ರಶ್ನೆಗಳಿಗೇ ಹೆಚ್ಚಾಗಿ ಉತ್ತರಿಸಲು ಕಾರಣವೇನು?*



ಗಂಡಸರ ಭವಿಷ್ಯ ಹೆಂಗಸರ ಕೈಯಲ್ಲೇ ಇರುವುದರಿಂದ ಅವರಿಗೆ ಉತ್ತರಿಸಿದರೆ ಇವರಿಗೂ ಉತ್ತರಿಸಿದಂತಾಯಿತೆಂದು.

ಎಸ್.ಜಿ. ಕರನಂದಿ, ಹುನಗುಂದ

*ಜಗವೊಂದು ನಾಟಕ ರಂಗವಾದರೆ ರಾಜಕಾರಣಿಗಳ ಪಾತ್ರ ಎಷ್ಟು ಸನ್ನಿವೇಶಗಳದ್ದಾಗಿರುತ್ತದೆ?*

ಪ್ರಶ್ನೆಯಲ್ಲಿ ಪರಪಾಟಿದೆ. ಅದು ಎಷ್ಟು ಸನ್‌ಗಳದು, ಎಷ್ಟು ನಿವೇಶನಗಳದು ಎಂದಿರಬೇಕಿತ್ತು!

ಅಮರಯ್ಯಾ ಪತ್ರಿಮಠ, ಸುರಪೂರ

*ವಯೋಸಹಜ ಬಿಳಿ ಕೂದಲನ್ನು ಕಪ್ಪು ಮಾಡಿಕೊಳ್ಳುವ ಹುನ್ನಾರವೇಕೆ?*

ಚೆಲುವೆಯರಿಂದ ತಾತ ಎನಿಸಿಕೊಳ್ಳುವ ಬದಲು ಅಂಕಲ್ ಎನಿಸಿಕೊಳ್ಳುವ ಹಂಬಲ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು

*ಸೃಷ್ಟಿಯ ಅತ್ಯಂತ ಮೂಲಭೂತ ಕೇಂದ್ರ ಯಾವುದು?*



ಹೊಟ್ಟೆ.

ಸುಂದರ್, ಬೆಂಗಳೂರು

*ಸನ್ಮಾನಕ್ಕೂ, ಅವಮಾನಕ್ಕೂ ವ್ಯತ್ಯಾಸವೇನು?*

ಇಂದಿನ ದಿನಗಳಲ್ಲಿ ಅಯ್ಯಾ ಎಂದರೆ ಸನ್ಮಾನ, ಏಕಯ್ಯಾ ಎಂದರೆ ಅವಮಾನ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಕಳೇಬರ ಎಂದರೇನು?*

ಜೀವಕಳೆಗೆ ಬರ ಬಂದಿರುವುದು ಎಂದರ್ಥ. ವಿಧಾನಸೌಧದಲ್ಲಿ ಈ ವಿಧದ ಹಲವಾರು ಸ್ಯಾಂಪಲ್‌ಗಳು ಲಭ್ಯ.

ಎಂ.ಎ. ಕುಮಾರ್, ಬೆಂಗಳೂರು

*ಸೂರ್ಯ ಉದಯಿಸುವಾಗ ಸೂರ್ಯನಮಸ್ಕಾರ ಮಾಡುತ್ತಾರೆ. ಚಂದ್ರ ಉದಯಿಸುವಾಗ ಚಂದ್ರನಮಸ್ಕಾರ ಏಕಿಲ್ಲ?*

ಸೂರ್ಯನದು ಸ್ವಯಂಪ್ರಭೆ; ಚಂದ್ರನದು ಎರವಲು ಬೆಳಕು. ಎರವಲು ಪಡೆದು ಶೋಕಿ ಮಾಡುವವರಿಗೆ ಗೌರವ ಸಲ್ಲದು.

ಕೆ.ಎಂ. ಲಿಂಗರಾಜು, ನಂಜನಗೂಡು

*ನಮ್ಮ ರಾಜಕಾರಣಿಗಳಿಗೆ ವೈರಾಗ್ಯ ಬರುವುದು ಯಾವಾಗ?*

ಈಗಲೇ ಇದೆಯಲ್ಲ – ಶ್ರಮ ವೈರಾಗ್ಯ, ಸತ್ಯ ವೈರಾಗ್ಯ, ನಿಷ್ಠೆ ವೈರಾಗ್ಯ...

ಮೋಹನರಾಜು ಎಸ್.ಎ., ಶಿವಮೊಗ್ಗ

*ಅತಿವೇಗ ಅಪಾಯಕಾರಿ. ಆಮೆವೇಗ...?*

ಸರ್ಕಾರಿ.

ವಿ. ಹಮೀದ್, ವಿಟ್ಲ

*ಕನಸಿನ ಚೆಲುವೆಗೂ, ವಾಸ್ತವದ ಚೆಲುವೆಗೂ ಇರುವ ವ್ಯತ್ಯಾಸವೇನು?*

ಅವಳು ಕನಸಿನಲ್ಲಿ ವಾಸ್ತವ; ಇವಳು ವಾಸ್ತವದಲ್ಲಿ ಕನಸು.

ದ್ವಾರಕಾನಾಥ್, ಬೆಂಗಳೂರು

*ಸಮಾಜದಲ್ಲಿ ಲಿಂಗಭೇದವನ್ನು ಕಿತ್ತುಹಾಕಲು ರಾಷ್ಟ್ರಪತಿ, ಕುಲಪತಿ, ಪೀಠಾಧಿಪತಿ, ಇತ್ಯಾದಿ ಪದಗಳನ್ನು ಬದಲಿಸಬೇಡವೆ?*

ನಿಜ. ಈ ಹಗರಣಭರಿತ ಕಾಲದಲ್ಲಿ ಬದಲಿಸಲೇಬೇಕು – ರಾಷ್ಟ್ರ–ಕಿತಾಪತಿ; ಕುಲ–ಕಿತಾಪತಿ; ಪೀಠಾಧಿ–ಕಿತಾಪತಿ.....

ಮುರಲೀಧರ ಕುಲಕರ್ಣಿ, ಬೀದರ್

*ಶಾಸಕರ ಭವನದಲ್ಲಿ ಇಲಿಗಳ ಕಾಟ ತುಂಬ ಹೆಚ್ಚಿದೆಯಂತೆ. ಏಕಿರಬಹುದು?*

ದೊಡ್ಡ ಹೆಗ್ಗಣಗಳಿಂದ ಕಬಳಿಕೆಯ ಟ್ರೈನಿಂಗ್ ಪಡೆಯಲು ಎಲ್ಲೆಡೆಯಿಂದ ಬಂದಿವೆಯಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ರಾವಣನಿಗೆ ಹತ್ತು ತಲೆಗಳ ಬದಲಿಗೆ ಹತ್ತು ದೇಹಗಳೇ ಇದ್ದಿದ್ದರೆ ಏನಾಗುತ್ತಿತ್ತು ರಾಮ್‌ಜೀ?*

ಆಕ್ಟೋಪಸ್‌ನಂತೆ ಮಧ್ಯೆ ತಲೆ, ಸುತ್ತ ದೇಹಗಳಿದ್ದು, ಭೂಚಕ್ರದಂತೆ ಗಿರಿಗಿರಿ ತಿರುಗುತ್ತಾ ಓಡಾಡಬೇಕಾಗುತ್ತಿತ್ತು.

## ಬಹುಮಾನಿತ ಪ್ರಶ್ನೆ

ತಿಮ್ಮರಾಜು ದಾವಣಗೆರೆ

*ಮಾಡ್ರನ್ ವೈದ್ಯಕೀಯ ಕಾಲದಲ್ಲೂ ಸಿನಿಮಾಗಳಲ್ಲಿ ಗಾಯಕ್ಕೆ ಸುತ್ತಿದ ಬ್ಯಾಂಡೇಜ್ ಮೇಲೆ ರಕ್ತದ ಕಲೆ ಕಾಣುವುದಲ್ಲ?*

'ಕಲೆಗೆ ಆದ್ಯತೆ ಕೊಡಬೇಕು' ಎಂಬುದನ್ನು ನಿರ್ದೇಶಕ, ಮೇಕಪ್‌ಮ್ಯಾನ್ ತಪ್ಪಾಗಿ ತಿಳಿದ ಫಲ.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

*ಚಿಕ್ಕತಾಯಿ ರಾಜ್ಯ, ಕೋಶ ಸೆಳೆದುಕೊಂಡಳು; ಅವಳ ಮಗ ಚಪ್ಪಲಿಗಳನ್ನು ಕಸಿದುಕೊಂಡ. ಇದೆಂತಹ ರಾಮಭಕ್ತಿ?*

ಇಡೀ ಭೂಮಂಡಲ ರಾಮನ ದರ್ಶನ, ರಾಮಪಾದ ಸ್ಪರ್ಶನ ಪಡೆಯಲೆಂಬ ನಿಸ್ವಾರ್ಥ ಭಕ್ತಿಯ ಉತ್ತುಂಗವದು!

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

*ತುಂಬಾ ದಪ್ಪವಿರುವ ಸ್ನೇಹಿತರನ್ನು ವಾಕಿಂಗ್‌ಗೆ ಕರೆದರೆ 'ಬರುವುದಿಲ್ಲ. ಚಪ್ಪಲಿ ಸವೆದುಹೋಗತ್ತೆ' ಎಂದರಲ್ಲಾ...?*

ಉರುಳುಸೇವೆ ಮಾಡಲು ಹೇಳಿ; ಸುತ್ತಲೂ ಸವೆದಾರು.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಸರ್ಜಿಕಲ್ ಸ್ಟ್ರೈಕ್‌ಗೂ, ಸರ್ಜಿಕಲ್ ಆಪರೇಷನ್‌ಗೂ ವ್ಯತ್ಯಾಸವೇನು?*



ಛೆ! ಅಷ್ಟೊಂದು ನಿರಾಶರಾಗಬೇಡಿ. ಸರ್ಜಿಕಲ್ ಆಪರೇಷನ್‌ನಲ್ಲಿ ಜನ ಬದುಕುವ ಸಾಧ್ಯತೆ ಇರುತ್ತದೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

*ತಾಯಿ–ತಂದೆ ಇಬ್ಬರು ಕಣ್ಣಿಗೆ ಕಾಣುವ ದೇವರು. ಅತ್ತೆ–ಮಾವ?*

ಕಾಣದಂತೆ ದೂರವಿದ್ದಾಗ ಮಾತ್ರ ದೇವರು!

ಎಸ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

*ದುಡ್ಡನ್ನು ಕಂಡುಹಿಡಿದವರು ಯಾರು?*

ಡಾಕ್ಟ್ರು! ಸಮುದ್ರಮಥನವಾದಾಗ ಕೆಳಗೆಲ್ಲೋ ಅಡಗಿದ್ದ ಲಕ್ಷ್ಮಿಯನ್ನು ಕರೆತಂದವನು ಧನ್ವಂತರಿಯೇ.

■ ರಾಮ್